ಚಲನಶುದ್ಧಿ

ಭಾರತದ ದಾರಿದ್ರ್ಯ ನಿವಾರಣೆಗೆ ವಿಷಮತೆ ಪರಿಣಾಮಕಾರಕವಾಗಿ ಕಡಿಮೆ ಯಾಗಲು ಅರ್ಥಾತ್ ಸಮತಾವಾದದ ಸ್ಥಾಪನೆಗೆ ಇನ್ನೊಂದು ಅತ್ಯಂತಪ್ರಭಾವಿಯಾದ ಮೂಲಭೂತವಾದ ಮಾತಿನ ಅವಶ್ಯಕತೆಯಿದೆ. ಅದೆಂದರೆ ಚಲನಶುದ್ಧಿ. ಪ್ರತಿವರುಷದ ಕೊನೆಯ ದಿನ ಅಂದರೆ ೩೧ ನೇ ಡಿಸೆಂಬರಕ್ಕೆ ಭಾರತದಲ್ಲಿ ಆಸ್ತಿತ್ವದಲ್ಲಿರುವ ಎಲ್ಲ ಕರೆನ್ಸಿ ನೋಟುಗಳು ರದ್ದು ಆಗುವಹಾಗೆ ಅದಕ್ಕಾಗಿ ಅವನ್ನು ರಿನ್ಯೂಅಲ ಮಾಡಿಸಿಕೊಂಡು ಹೊಸ ಇಸವಿಯ ನೋಟುಗಳನ್ನು ಪಡೆಯಬೇಕಾಗುವದೆಂದೂ ಸರಕಾರ ಕಾಯಿದೆ ಮಾಡಿ ಬಿಡಬೇಕು. ಮತ್ತು ಈ ರೀತಿ ಹಳೇ ನೋಟು ಕೊಟ್ಟು ಹೊಸತು ಮಾಡಿ ಕೊಳ್ಳುವಾಗ [ರಿನ್ಯೂಅಲ] ನೂರಕ್ಕೆ ೬ ರೂಪಾಯಿಯಂತೆ ಕಮಿಶನ್ ಕೊಡುವದು ಅಗತ್ಯವಾಗಿದೆಯೆಂದೂ ಸಾರಬೇಕು. ಈ ನಿಯಮ ಎಲ್ಲರಿಗೂ ಬಡವರಿಂದ ಶ್ರೀಮಂತ ರವರೆಗೆ ಅನ್ವಯಿಸಲ್ಪಡುವದರಿಂದ ಯಾರು ಎಲ್ಲಿಂದ ಹೇಗೆ ದುಡ್ಡು ಸಂಗ್ರಹಿಸಿರುವ ರೆಂಬುದನ್ನು ಕೇಳುವ ಕಾರಣವೇ ಇಲ್ಲ. ಕಳ್ಳಪೇಟೆಯಿಂದ ಲಂಚತಿಂದು ಅಥವಾ ಅನ್ಯ ಯಾವದೇ ರೀತಿಯಿಂದ ದುಡ್ಡಿನ ಸಂಚಯ ಮಾಡಿದವರಿಗೂ ಯಾವದೇ ಶಿಕ್ಷೆಯ ಭಯವಿಲ್ಲದಿರುವದರಿಂದ ಮತ್ತು ಎಲ್ಲ ನೋಟುಗಳು ತನ್ನಷ್ಟಕ್ಕೆ ತಾವೇ ರದ್ದಾಗುವದರಿಂದ ಯಾವದೇ ರೀತಿಯ ಒತ್ತಾಯವಿಲ್ಲದೆ ಎಲ್ಲರಕಡೆಗೆ ಸಂಗ್ರಹದಲ್ಲಿದ್ದ ನೋಟುಗಳು ತಾನಾಗಿಯೇ ಸರಕಾರದಕಡೆಗೆ ಬರುವವು. ಈ ನೋಟು ಹೊಸತು ಮಾಡುವಾಗ ಬರಲಿರುವ ಕಮಿಶನ್ ಹಣವು ನಿದಾನ ಪ್ರತಿವರುಷ ಎರಡು ಸಾವಿರ ಕೋಟಿ ರೂಪಾಯಿಯ ಹೊಸ ಆದಾಯ ಸರಕಾರಕ್ಕೆ ಬರಲಿರುವದರಿಂದ ಅಷ್ಟು ಹಣದ ವರೆಗಿನ ಕರಗಳನ್ನು ಉಪ್ಪಿನ ಕರ, ಸಕ್ಕರೆಯ ಮೇಲಿನ ಕರ ಮುಂತಾದವುಗಳನ್ನು ರದ್ದ ಮಾಡಬಹುದು. ಇದರಿಂದ ಸಾಮಾನ್ಯಜನತೆ ಸರಕಾರವನ್ನು ಪ್ರಾಡಿ ಹರಿಸಬಹುದು.

ಕೋಟ್ಯಾವಧಿ ರೂಪಾಯಿಯ ನೋಟುಗಳ ಸಂಗ್ರಹವಿರುವವರಿಗೆ ಒಂದು ಸವ ಲತ್ತನ್ನೂ ಕೊಡಬಹುದೆಂದು ಈ ಸೂತ್ರನಿರೂಪಿಸಿದ ಶ್ರೀ ಅಪ್ಪಾಸಾಹೆಬ ಪಟವರ್ಧನ ರತ್ನಾಗಿರಿ ಅವರು ಅಭಿಪ್ರಾಯಪಟ್ಟಿದ್ದಾರೆ. ಅದು ಹೀಗೆ: ದೊಡ್ಡ ಶ್ರೀಮಂತರು ಅಥವಾ ಸಣ್ಣ ಶ್ರೀಮಂತರು ಒಂದುವರುಷದ ತಮ್ಮ ವ್ಯವಹಾರಕ್ಕೆ ಬೇಕಾಗುವಷ್ಟೇ ನೋಟುಗಳನ್ನು ಹೊಸತು ಮಾಡಿಸಿಕೊಂಡು ಉಳಿದ ಎಲ್ಲ ಹಣ ಸರಕಾರದಕಡೆಗೆ ಬಡ್ಡಿ ಇಲ್ಲದ ಠೇವು ಅಂತ ಇಡಬಹುದು. ತಿರುಗಿಪಡೆಯುವ ಹಣ ಕ್ಕಷ್ಟೇ ಕಮಿಶನ ಕೊಡಬೇಕಾಗುವದು. ಈ ರಿಯಾಯತಿ ಕೊಟ್ಟಿದ್ದಾದರೆ ಯಾರೂ

ತಮ್ಮ ಹಣ ಮುಳುಗಿತೆಂದು ಎದೆ ಒಡೆದುಕೊಳ್ಳುವ ಕಾರಣ ಉಳಿಯುವದಿಲ್ಲ. ಇಟ್ಟ ಲ್ಲಿಯೇ ನೋಟುಗಳು ರದ್ದಾಗುವದರಿಂದ ಶ್ರೀಮಂತರು ತಮ್ಮ ಸಂಗ್ರಹದಲ್ಲಿದ್ದ ನೋಟು ಗಳನ್ನು ಕ್ಯೂ ಹಚ್ಚಿ ನಾಮುಂದೆ ನೀಮುಂದೆ ಎಂದು ಆತುರದಿಂದ ಸರಕಾರದಕಡೆಗೆ ತಂದು ಖಂಡಿತವಾಗಿ ಒಪ್ಪಿಸುವರು. ಈ ರೀತಿ ಬಂಡವಲಗಾರರ ಹತ್ತರ ಶಿಲಕು ಇರುವ ಎಲ್ಲ ನೋಟು ನಿಧಿಯ ಪ್ರಚಂಡವಾದ ಹಣ ಸರಕಾರಕ್ಕೆ ಬಡ್ಡಿ ಇಲ್ಲದೆ ಸಿಗುವದಿಂದ ಅದೇ ಹಣವನ್ನು ಸರಕಾರವು ನೂರಕ್ಕೆ ಒಂದೇ ಒಂದು ರೂಪಾಯಿಯು ನಾಮಮಾತ್ರ ಬಡ್ಡಿಯಿಂದ ಬ್ಯಾಂಕುಗಳಿಗೆ ಸಾಲ ರೂಪದಿಂದ ಕೊಡಬಹುದು. ಮತ್ತು ಬ್ಯಾಂಕುಗಳು ಜನರಿಗೆ–ಬಡವರಿಗೆ ತಮ್ಮ ಆಡಳಿತವೆಚ್ಚದ ನಾಮಮಾತ್ರ ಇನ್ನೊಂದು ರೂಪಾಯಿ ಸೇರಿಸಿ ನೂರಕ್ಕೆ ಎರಡರಂತೆ ಬಡ್ಡಿಯಿಂದ ಸಾಲ ಕೊಟ್ಟಿದ್ದಾದರೆ ಮಾತ್ರ ಗರಿಬಿ ಹಟಾವ ಆದೀತು ನೂರಕ್ಕೆ ೧೨ ರ ಬಡ್ಡಿಯಿಂದ ಬ್ಯಾಂಕುಗಳು ಸಾಲ ಕೊಡುತ್ತಿರುವ ಈಗಿನ ಪದ್ಧತಿಯಿಂದ ಮತ್ತು ನೂರಕ್ಕೆ ೩೦೦ ಬಡ್ಡಿಯಿಂದ ಪ್ರತಿಹಳ್ಳಿಯಲ್ಲಿಯೂ ನಡೆದ ಸಾವುಕಾರರ ವಾರದ ಬಡ್ಡಿಯ ಪದ್ಧತಿಯಿಂದಾಗುವ ಶೋಷಣೆಯಿಂದ ಜನರನ್ನು, ಬಡವರನ್ನು ಮುಕ್ತ ಮಾಡಬಹುದು. ಆಗ ಮಾತ್ರ–ಒಂದೇ ಕಲ್ಲಿನಿಂದ ಎರಡು ದುಷ್ಟ ಶಕ್ತಿಗಳನ್ನು ಅಂದರೆ ಬಂಡವಲಶಾಹಿ ಮತ್ತು ದರಿದ್ರ ರಾಕ್ಷಸ ಇವರಿಬ್ಬರನ್ನು ಇಲ್ಲದಂತೆ ಮಾಡಿ ನಿಜವಾದ ಸಮತಾ ರಾಜ್ಯ ಸ್ಥಾಪಿಸಬಹುದು.

ಇಂಥ ಅತ್ಯಂತ ಪ್ರಭಾವಿ, ಅತ್ಯಂತ ಕ್ರಾಂತಿಕಾರಿ, ಆದರೆ ಅಷ್ಟೇ ಸುಲಭ ಕ್ರಮ ಕೈಕೊಳ್ಳುವದನ್ನು ಬಿಟ್ಟು ಗರಿಬಿ ಹಟಾವದ ಪೊಳ್ಳು ಘೋಷಣೆ ಮಾಡುತ್ತ ನೂರಾರು ಪರುಷ ನಡೆದರೂ ಯಾವ ಉಪಯೋಗವೂ ಆಗಲಾರದೆಂದು ಈ ಮಂತ್ರದ ದೃಷ್ಟಾರ ರಾಗಿದ್ದ ದಿವಂಗತ ಅಪ್ಪಾ ಸಾಹೇಬ ಪಟವರ್ಧನರು ಪ್ರತಿಪಾದಿಸಿದ್ದಾರೆ. ಜನರು ಸರಕಾ ರಕ್ಕೆ ನೋಟು ಕೊಡಬೆ ಬಂಗಾರದ ರೂಪದಲ್ಲಿ ಅದನ್ನು ಕೊಂಡು ಸಂಗ್ರಹಿಸಿ ಇಡ ಬಹುದು ಇವೇ ಮುಂತಾಗಿ ನಿರರ್ಥಕ ಸಂಶಯಗಳಿಗೆಲ್ಲ ಅತ್ಯಂತ ಸಮರ್ಪಕವಾಗಿ ತಮ್ಮ ಪುಸ್ತಕದಲ್ಲಿ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಅಪ್ಪಾ ಸಾಹೇಬರೆಂದರೆ ಅದ್ವಿತೀಯ ತ್ಯಾಗದ, ಅನುಪಮ ದೇಶಭಕ್ತಿಯ ಅಪ್ರತಿಹತ ಬುದ್ಧಿವಂತಿಕೆಯ ಮತ್ತು ಅಲೌಕಿಕ ಚಾರಿತ್ರ್ಯ ಶುದ್ಧಿಯ ಮೂರ್ತಿಯೇ ಆಗಿದ್ದರು. ೧೯೨೦ ರ ಅಸಹಕಾರ ಆಂದೋಲನದಲ್ಲಿ ಪ್ರೊಫೆಸರ ಹುದ್ದೆಗೆ ರಾಜೀ ನಾಮೆಸಲ್ಲಿಸಿ ಅಂದಿನಿಂದ ಕೊನೆಯವರೆಗೆ ನಡೆದ ಪ್ರತಿಯೊಂದು ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಭಾಗವಹಿಸಿ ಮಹಾರಾಷ್ಟ್ರದ ಗಾಂಧಿ ಎಂಬ ಸಾರ್ಥಕನಾಮ ಪಡೆದು ಪ್ರಸಿದ್ಧಿಗೆ ಬಂದಿದ್ದ ಮಹಾನ್ ದೇಶಭಕ್ತರು ಅವರಾಗಿದ್ದರು ! ಇಂಥ ಮಹಾತ್ಮರು ತೋರಿಸಿದ ದಾರಿ ನಮ್ಮ ಸರಕಾರಕ್ಕೆ ಹುಚ್ಚತನದ್ದಾಗಿ ಕಾಣಿಸುತ್ತಿರುವದು ದೇಶದ ದುರ್ದೈವ ! ಇಂದಿಲ್ಲ ನಾಳೆ ಜನತೆಗೂ ಸರಕಾರಗಳಿಗೂ ವಿವೇಕೋದಯವಾದೀತೆಂಬ ಭರವಸೆಯನ್ನು ಅವರು ತಾಳಿದ್ದರು.

ಈ ಪ್ರಕರಣ ಬರೆಯುತ್ತಿರುವಾಗಲೇ ಇಂಥ ವಿವೇಕೋದಯವಾಗುತ್ತಿರುವ ಒಂದು ಅತ್ಯಂತ ಶುಭಸೂಚನೆಯೂ ದೇಶದಲ್ಲಿ ಒಂದುಕಡೆಗೆ ಕಾಣಹತ್ತಿದ್ದು ಭವಿಷ್ಯದ ಬಗ್ಗೆ ಆಶೆಯನ್ನು ಹುಟ್ಟಿಸುವಂಥದ್ದಾಗಿದೆ. ಅದೆಂದರೆ ಮದ್ರಾಸ ರಾಜ್ಯ ಸರಕಾರವು ಇತ್ತಿತ್ತಲಾಗಿ ಸುರುಮಾಡಿದ್ದ ಸೆರೆ ಸಿಂದಿ ಅಂಗಡಿಗಳನ್ನು ಮತ್ತೆ ಮುಚ್ಚಿ ಬಿಡುವ ನಿರ್ಣಯಕ್ಕೆ ಬಂದ ಸುದ್ದಿವೃತ್ತ ಪತ್ರಿಕೆಗಳಲ್ಲಿ ಪ್ರಸಿದ್ಧವಾದದ್ದು. ಬಡವರ ನಿಜವಾದ ಕಳಕಳಿ ಇದ್ದವರು ಈ ದಾರಿಗೆ ಬರಲೇ ಬೇಕಾಗುವದು. ನಮ್ಮ ಕಾಂಗ್ರೆಸ ಸರಕಾರಗಳು ದ್ರಾಮುಕ ಸರಕಾರದ ನೀತಿಯಿಂದಾದರೂ ಬುದ್ಧಿಕಲಿಯಲೆಂದು ಹಾರೈಸೋಣ.

ನಿರ್ಧಾರದಿಂದ ಕಾರ್ಯ ಪ್ರವೃತರಾಗಬೇಕು.

ಕೆಲವು ಅತ್ಯಂತ ಮಹತ್ವದ ಸಂಗತಿಗಳನ್ನು ಸಾಧಿಸಿಯೇ ತಿರುವೆವೆಂಬ ನಿರ್ಧಾರ ಬೇಕು. ಶ್ರದ್ಧೆ ಬೇಕು. ಶುಷ್ಕವಾದ ಹಾಳು ಹರಟೆ ಒಣ ಟೀಕೆ ನಿಲ್ಲಬೇಕು. ಅಂದರೆ ನಮ್ಮ ನಿಜವಾದ ಪ್ರಗತಿಯಾದೀತು. ಮತ ದೊರಕಿಸುವದಕ್ಕಾಗಿ ಹುರುಳಿಲ್ಲದ ಪೊಳ್ಳು ಘೋಷಣೆ ಮಾಡಿ ಈ ಕಾರ್ಯವಾಗಲಾರದು. ನಮ್ಮ ಯುವಕರು ಈ ಬಗ್ಗೆ ಗಂಭೀರವಾಗಿ ವಿಚಾರಿಸದಿದ್ದರೆ ಅವರ ಭವಿಷ್ಯ ಹಾಗೂ ದೇಶದ ಭವಿತವ್ಯ ಕತ್ತಲಲ್ಲಿಯೇ ಉಳಿದೀತು.

ಪಾನ ಪ್ರತಿಬಂಧ ಆಗಲಿ

ಅತ್ಯಂತ ಮಹತ್ವದ ಮೊದಲನೇ ವಿಷಯ ಪಾನಪ್ರತಿಬಂಧ. ಈ ವಿಷಯವನ್ನು ಎತ್ತುವದೇ ತಡ ತಾವು ಸುಶಿಕ್ಷಿತರೆಂದು ತಿಳಿದುಕೊಂಡಿರುವ ಅಶಿಕ್ಷಿತರೋ, ಅರ್ಧಶಿಕ್ಷಿತರೋ ಅಥವಾ ಕುಶಿಕ್ಷಿತರೋ, ಒಮ್ಮಲೆ ಇದು ಶಕ್ಯವಿಲ್ಲ, ಮಾಡಿ ನೋಡಿದ್ದಾಯಿತು ಇದು ಯಶಸ್ವಿಯಾಗಲಾರದು, ಎಂಬ ನಿರಾಶೆಯ ನಿಟ್ಟುಸುರು ಎಳೆಯುವದು, ಅವರ ವಿಚಾರಸರಣಿಯಲ್ಲಿಯೇ ಖಂಡಿತವಾಗಿ ದೋಷವಿದೆ ಯೆಂಬುದನ್ನು ಇಲ್ಲಿ ತೋರಿಸ ಬೇಕಾಗಿದೆ. ಪಾನಪ್ರತಿಬಂಧವು ಆಯೋಗ್ಯವೆಂದು ಯಾರು ಅನ್ನುವದಿಲ್ಲ. ಆದರೆ ಅದರ ಮೇಲೆ ಶ್ರದ್ಧೆಯಿಲ್ಲದ್ದರಿಂದ ಅವರ ನಿರಾಶೆವಾಗಿದೆ. ಪ್ರಾಚೀನಕಾಲದಿಂದಲೂ ಮಾದಕ ಪದಾರ್ಥ ಸೇವನೆ ನಡೆಯುತ್ತಲೇ ಬಂದಿರುವದರಿಂದ ಅದನ್ನು ನಿಲ್ಲಿಸುವಮ ಸಾಧ್ಯವಿಲ್ಲ ವೆಂಬದು ಅವರ ಮೊದಲನೇ ಆಕ್ಷೇಪ. ಈ ಆಕ್ಷೇಪದಲ್ಲಿ ಯಾವ ಹುರಳೂ ಇಲ್ಲ. ಬಹುದಿನಗಳಿಂದ ನಡೆಯುತ್ತ ಬಂದ ಕೆಟ್ಟರೂಢಿ ಕೆಟ್ಟ ನಿಯಮಗಳೆನ್ನು ಈಗ ನಾವು ತಿದ್ದುವ, ನಿಲ್ಲಿಸುವ ಪ್ರಯತ್ನ ಮಾಡಬಾರದೇ ? ಹಾಗಾದರೆ ನಮ್ಮ ದೇಶದ ನೂರಕ್ಕೆ